# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

(ಗ್ರಂಥಾಲಯ ಶಾಖೆ)

ಸಂ:ಕರಾಅಮವಿವಿ/ಗ್ರಂಸಸ/ಸಭೆ/2021-22/ ದಿನಾಂಕ: 02-02-2022

ದಿನಾಂಕ 02-02-2022 ರಂದು ಬೆಳಿಗ್ಗೆ 11:30 ಗಂಟೆಗೆ ತೊರವಿ ಆವರಣದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಲಿರುವ ಗ್ರಂಥಾಲಯ ಸಲಹಾ ಸಮಿತಿ ಸಭೆಯ ಸದಸ್ಯರು

| | |
|---|---|
| 1. ಪ್ರೊ. ಬಿ.ಕೆ ತುಳಸಿಮಾಲ ಕುಲಪತಿಗಳು | ಅಧ್ಯಕ್ಷರು |
| 2. ಪ್ರೊ ವಿ.ಸಿ ಸವದಿ ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. ಡಾ. ಗುಲೆ ಆರಿಫ್ ಸಿಂಡಿಕೇಟ್ ಸದಸ್ಯರು | ಸದಸ್ಯರು |
| 4. ಶ್ರೀರೇವಣಸಿದ್ದಪ್ಪ ನಡಕಟ್ಟಿ ವಿದ್ಯಾವಿಷಯಕ ಪರಿಷತ್ ಸದಸ್ಯರು, | ಸದಸ್ಯರು |
| 5. ಶ್ರೀಮತಿ ಸಂಗಮ್ಮ ದೇವರಹಳ್ಳಿ ವಿದ್ಯಾವಿಷಯಕ ಪರಿಷತ್ ಸದಸ್ಯರು, | ಸದಸ್ಯರು |
| 6. ಡೀನರು, ಕಲಾ ನಿಕಾಯ | ಸದಸ್ಯರು |
| 7. ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 8. ಡೀನರು, ಸಮಾಜ ವಿಜ್ಞಾನ ನಿಕಾಯ | ಸದಸ್ಯರು |
| 9. ಡೀನರು, ವಾಣಿಜ್ಯ ನಿಕಾಯ, | ಸದಸ್ಯರು |
| 10. ಡೀನರು, ಶಿಕ್ಷಣ ನಿಕಾಯ, | ಸದಸ್ಯರು |
| 11. ನಿರ್ದೇಶಕರು, ಕ್ರೀಡಾ ನಿರ್ದೇಶನಾಲಯ | ಸದಸ್ಯರು |
| 12. ನಿರ್ದೇಶಕರು, ಪ್ರಸಾರಾಂಗ | ಸದಸ್ಯರು |
| 13. ಕುಲಸಚಿವರು | ಸದಸ್ಯರು |
| 14. ಆರ್ಥಿಕ ಅಧಿಕಾರಿಗಳು | ಸದಸ್ಯರು |
| 15. ಡಾ. ಗವಿಸಿದ್ದಪ್ಪ ಆನಂದಹಳ್ಳಿ, ಗ್ರಂಥಪಾಲಕರು | ಸದಸ್ಯ-ಸಂಚಾಲಕರು |

**ಸಭೆಗೆ ಗೈರಾದ ಸದಸ್ಯರು**

ಶ್ರೀ ನಿರಾಣಿ ಹಣಮಂತಪ್ಪ ಆರ್, ವಿಧಾನ ಪರಿಷತ್ ಸದಸ್ಯರು ಹಾಗೂ ವಿದ್ಯಾವಿಷಯಕ್ ಪರಿಷತ್ ಸದದ್ಯರು

**ದಿನಾಂಕ 02-02-2022 ರಂದು ಬೆಳಿಗ್ಗೆ 11:30 ಗಂಟೆಗೆ ತೊರವಿ ಆವರಣದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳು**

ಗ್ರಂಥಪಾಲಕರು ಸಭೆಗೆ ಹಾಜರಾದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಸ್ವಾಗತ ಕೋರಿದರು. ನಂತರ ಸಭೆ ಪ್ರಾರಂಭವಾಯಿತು.

ಐಟಂ ನಂ.1:ದಿನಾಂಕ: 05-11-2020 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳು ಅನುಮೋದನೆಗಾಗಿ. ಅಡಕ-1

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ದೃಢೀಕರಿಸಲಾಯಿತು

ಐಟಂ ನಂ.2:ದಿನಾಂಕ: 05-11-2020 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಮೇಲೆ ಜರುಗಿಸಲಾದ ಕ್ರಮಗಳ ಕುರಿತು. ಅಡಕ-2

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ದೃಢೀಕರಿಸಲಾಯಿತು

ಐಟಂ: 03: 2021-22 ನೇ ಸಾಲಿಗಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಧ್ಯಯನ ವಿಭಾಗಗಳಿಗೆ ಹಣ ಹಂಚಿಕೆ ಮಾಡುವುದು, ಮತ್ತು ಗ್ರಂಥಗಳನ್ನು ಖರೀದಿಸುವ ಕುರಿತು.

ಪ್ರಸ್ತಾವನೆ: 2021-22ನೇ ಸಾಲಿಗಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಯನ ವಿಭಾಗಗಳಿಗೆ ಗ್ರಂಥ ಖರೀದಿ ಪ್ರಕ್ರಿಯೆ ಪ್ರಾರಂಭವಾಗಿದ್ದು,ಗ್ರಂಥಾಲಯದ ಗ್ರಂಥ ಖರೀದಿ ನಿಯಮಾವಳಿಯಂತೆ ಗ್ರಂಥಗಳ ಸರಬರಾಜುದಾರರಿಗೆ 2021-22ನೇ ಸಾಲಿನ ಗ್ರಂಥಗಳನ್ನು ಪೂರೈಕೆ ಮಾಡಲು ಸದಸ್ಯತ್ವ ಪಡೆಯಲು ದಿನಾಂಕ: 03-09-2021ರಂದು ಪತ್ರಿಕಾ ಪ್ರಕಟಣೆ ನೀಡಿದ್ದು ಅದರಂತೆ 34 ಸರಬರಾಜುದಾರರು/ಪ್ರಕಾಶಕರು ನಿಗದಿಪಡಿಸಿದ ಶುಲ್ಕ ರೂ. 1000/- ಯಂತೆ ಡಿ.ಡಿ ಸಲ್ಲಿಸಿರುತ್ತಾರೆ. ಅದರ ಒಟ್ಟು ಮೊತ್ತ ರೂ. 34,000/-ಗಳ ಡಿ.ಡಿ.ಗಳನ್ನು ದಿನಾಂಕ: 12/10/2021ರಂದು ವಿಶ್ವವಿದ್ಯಾನಿಲಯದ ಆರ್ಥಿಕ ಅಧಿಕಾರಿಗಳ ಶಾಖೆಗೆ ಜಮಾಗಾಗಿ ಸಲ್ಲಿಸಲಾಗಿದೆ. ಮುಂದುವರೆದು, ವಿಶ್ವವಿದ್ಯಾನಿಲಯದ ಎಲ್ಲ ಅಧ್ಯಯನ ವಿಭಾಗಳಿಗೆ ಗ್ರಂಥಗಳ ಪಟ್ಟಿ ಸಲ್ಲಿಸಲು ಸುತ್ತೋಲೆ ಕಳಿಸಲಾಗಿತ್ತು. ಅದರಂತೆ ಪ್ರಸ್ತುತ 15 ವಿಭಾಗಗಳಿಂದ ಪಟ್ಟಿಗಳು ಸಲ್ಲಿಕೆಯಾಗಿವೆ. ಇನ್ನುಳಿದ ವಿಭಾಗಗಳಿಗೆ ನೆನಪೋಲೆಯನ್ನು ಕಳುಹಿಸಲಾಗಿದ್ದು, ಗ್ರಂಥಗಳ ಪಟ್ಟಿಯನ್ನು ಗ್ರಂಥಾಲಯಕ್ಕೆ ತ್ವರಿತಗತಿಯಲ್ಲಿ ಪಡೆದುಕೊಳ್ಳಲಾಗುವುದು. ಗ್ರಂಥಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸಬೇಕಾಗಿದ್ದರಿಂದ ವಿಭಾಗವಾರು ಈ ಕೆಳಕಂಡಂತೆ ಹಣ ಹಂಚಿಕೆ ಮಾಡಲಾಗುವುದು. ಈ ವಿಷಯವನ್ನು ಗ್ರಂಥಾಲಯ ಸಲಹಾ ಸಮಿತಿ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

| Sl. No | Departments | Amount |
|---|---|---|
| 1 | Kannada | 35,000 |
| 2 | Hindi | 35,000 |
| 3 | Urdu | 35,000 |
| 4 | English | 35,000 |
| 5 | Sociology | 35,000 |
| 6 | Political Science | 35,000 |
| 7 | Economics | 35,000 |
| 8 | History | 35,000 |
| 9 | Social Work | 35,000 |
| 10 | Women's Studies | 35,000 |
| 11 | Library and Information Science | 35,000 |
| 12 | Journalism and Mass communication | 35,000 |
| 13 | Physics | 35,000 |
| 14 | Chemistry | 35,000 |
| 15 | Mathematics | 35,000 |
| 16 | Statics | 35,000 |
| 17 | Botany | 35,000 |
| 18 | Zoology | 35,000 |
| 19 | Biotechnology | 35,000 |
| 20 | Bioinformatics | 35,000 |
| 21 | Food and Nutrition | 35,000 |
| 22 | Commerce | 35,000 |
| 23 | Management | 35,000 |
| 24 | Education | 35,000 |
| 25 | Physical Education | 35,000 |
| 26 | Performing Arts (Music) | 35,000 |
| 27 | Yoga | 35,000 |
| 28 | Computer Science M Sc and MCA | 50,000 |

### ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಮೇಲೆ ಕಾಣಿಸಿದ ಒಟ್ಟು–28 ಅಧ್ಯಯನ ವಿಭಾಗಗಳಿಗೆ ತಲಾ ರೂ. 35,000/– ಮತ್ತು ಗಣಕಯಂತ್ರ ವಿಭಾಗಕ್ಕೆ 50,000/–ಗಳಂತೆ ಹಣವನ್ನು ಹಂಚಿಕೆ ಮಾಡಿ ಹಂಚಿಕೆಯಾದ ಹಣದಲ್ಲಿ ಗ್ರಂಥಾಲಯ, ಗ್ರಂಥಗಳನ್ನು ನಿಯಮಾವಳಿಗಳ ಪ್ರಕಾರ ನೊಂದಾಯಿತ ಪ್ರಕಾಶಕರಿಂದ ಅವರ ಅನುಭವ ಮತ್ತು ಪರಿಣಿತಿಯ ಅನುಗುಣವಾಗಿ ಖರೀದಿಸಲು ಸಭೆ ಅನುಮೋದಿಸಿತು.

ಐಟಂ: 04: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಮಂಡ್ಯ, ಸಿಂಧನೂರು, ಮತ್ತು ಉಡುತಡಿ ಗ್ರಂಥಾಲಯಗಳಿಗೆ ಗ್ರಂಥಗಳನ್ನು ಖರೀದಿಸುವ ಕುರಿತು.

ಸ್ನಾತಕೋತ್ತರ ಕೇಂದ್ರಗಳಾದ ಮಂಡ್ಯ, ಸಿಂಧನೂರು ಮತ್ತು ಉಡುತಡಿಗೆ ಸದರಿ ಕೇಂದ್ರಗಳ ಮುಖ್ಯಸ್ಥರುಗಳು ಗ್ರಂಥಗಳ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ಕೇಂದ್ರಗಳ ವಿದ್ಯಾರ್ಥಿಗಳ ಅಧ್ಯಯನದ ಹಿತದೃಷ್ಟಿಯಿಂದ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಗ್ರಂಥಗಳನ್ನು ಖರೀದಿಸುವ ಅವಶ್ಯಕತೆಯಿದ್ದು, ಆಯಾ ಕೇಂದ್ರಗಳಿಗೂ ಕೂಡಾ ಹಣ ಹಂಚಿಗೆ ಮಾಡಬೇಕಾಗಿರುವುದರಿಂದ ಈ ವಿಷಯನ್ನು ಗ್ರಂಥಾಲಯ ಸಲಹಾ ಸಮಿತಿ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

| Sl. No | Departments | Amount |
|---|---|---|
| | **ಮಂಡ್ಯ** | 50,000/- |
| 1 | ಕನ್ನಡ | |
| 2 | ಇಂಗೀಷ | |
| 3 | ಮಹಿಳಾ ಅಧ್ಯಯನ | |
| 4 | ಗಣಿತ | |
| 5 | ವಾಣಿಜ್ಯ | |
| | **ಸಿಂಧನೂರು** | |
| 1 | ಕನ್ನಡ | 50,000/- |
| 2 | ಇಂಗ್ಲೀಷ್ | |
| 3 | ವಾಣಿಜ್ಯ | |
| | **ಉಡುತಡಿ** | 20,000/– |
| 1 | ವಾಣಿಜ್ಯ | |

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಈ ಮೇಲಿನಂತೆ ವಿಶ್ವವಿದ್ಯಾನಿಲಯದ ಪಿ.ಜಿ ಕೇಂದ್ರಗಳಿಗೆ ಗ್ರಂಥ ಖರೀದಿಗೆ ಹಣ ಹಂಚಿಕೆ ಮಾಡಿ ನೊಂದಾಯಿತ ಪ್ರಕಾಶಕರಿಂದ ಹಂಚಿಕೆಯಾದ ಹಣದಲ್ಲಿ ಗ್ರಂಥಗಳನ್ನು ಖರೀದಿ ಮಾಡಲು ಸಭೆ ಅನುಮೋದಿಸಿತು.

**ಐಟಂ ನಂ: 5: ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಪ್ರಾರಂಭವಾದ ಯುಜಿ ಕೋರ್ಸುಗಳಿಗೆ ಗ್ರಂಥಗಳನ್ನು ಖರೀದಿ ಮಾಡುವ ಕುರಿತು.**

**ಪ್ರಸ್ತಾವನೆ:** ವಿಶ್ವವಿದ್ಯಾನಿಲಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 ರಡಿಯಲ್ಲಿ ಪ್ರಾರಂಭವಾದ ಸ್ನಾತಕ (ಯುಜಿ)ವಿದ್ಯಾರ್ಥಿನಿಯರ ಅಧ್ಯಯನದ ಹಿತದೃಷ್ಟಿಯಿಂದ ಗ್ರಂಥ ಖರೀದಿಗೆ ಅನುದಾನ ನೀಡುವ ಅವಶ್ಯಕತೆಯಿದ್ದು, ಸದರಿ ವಿಭಾಗಗಳ ಗ್ರಂಥಗಳನ್ನು ಖರೀದಿಸಲು ಕೆಳಗಿನಂತೆ ಹಣ ಹಂಚಿಕೆ ಮಾಡಬೇಕಾಗಿದ್ದು, ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

| Sl. No | Departments | Amount |
|---|---|---|
| 1 | ರಸಾಯನಶಾಸ್ತ್ರ, | 1,50,000/– |
| 2 | ಸಸ್ಯಶಾಸ್ತ್ರ | |
| 3 | ಭೌತಶಾಸ್ತ್ರ | |
| 4 | ಗಣಿತಶಾಸ್ತ್ರ | |

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಈ ಮೇಲಿನಂತೆ ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ವಿಭಾಗಗಳ ಗ್ರಂಥಗಳ ಖರೀದಿಗೆ ಹಣ ಹಂಚಿಕೆ ಮಾಡಿ ಮೇಲೆ ಕಾಣಿಸಿದ ವಿಷಯಗಳ ಗ್ರಂಥಗಳನ್ನು ನಿಯಮಾನುಸಾರ ಖರೀದಿಸಲು ಸಭೆ ಅನುಮೋದಿಸಿತು.

ಐಟಂ ನಂ: 6: 2021-22ನೇ ಸಾಲಿಗೆ Subscription of New Journals / Renewal of Current Periodical/ Magazines/News Papers. ಕುರಿತು ಚರ್ಚಿಸುವುದು.

ಪ್ರಸ್ತಾವನೆ: 2021–22ನೇ ಸಾಲಿಗಾಗಿ ವಿವಿದ ವಿಭಾಗಗಳ ಮುಖ್ಯಸ್ಥರುಗಳ ಶಿಫಾರಸ್ಸಿನ ಮೇರೆಗೆ ನಿಯತಕಾಲಿಕೆಗಳ ನವೀಕರಣ ಮತ್ತು ಹೊಸ ನಿಯತಕಾಲಿಕೆಗಳ ಖರೀದಿಸಲು ಅನುಮತಿ ನೀಡುವ ಕುರಿತು.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

**2021–22 ನೇ ಸಾಲಿಗೆ ನಿಯತಕಾಲಿಕೆಗಳ ನವೀಕರಣ ಮತ್ತು ಹೊಸ ನಿಯತಕಾಲಿಕೆಗಳ ನವೀಕರಿಸಲಿಕೆ ಸಭೆ ಅನುಮೋದನೆ ನೀಡಲಾಯಿತು.**

ಐಟಂ ನಂ: 7: 2021–22 ನೇ ಸಾಲಿಗೆ Emerald e- resources data base ನವೀಕರಿಸುವ ಕುರಿತು.

ಪ್ರಸ್ತಾವನೆ: 138 ನಿಯತಕಾಲಿಕಗಳನ್ನು ಒಳಗೊಂಡ Emerald e- resources data base ನ್ನು 2017–18 ರಿಂದ UGC- INFLIBNET ನ ಮುಖಾಂತರ ರಿಯಾಯತಿ ದರದಲ್ಲಿ ಪಡೆಯಲಾಗುತ್ತಿದ್ದು, ಕಳೆದ ವರ್ಷಕೂಡ ರೂ 4,60,226/–ಗಳನ್ನು ಪಾವತಿಮಾಡಿ ಇದರ ಉಪಯೋಗವನ್ನು ಪಡೆಯಲಾಗುತ್ತಿದ್ದು, ಸದರಿ e-Journals ಬೋಧಕ ಮತ್ತು ಸಂಶೋಧನೆ ವಿದ್ಯಾರ್ಥಿನಿಯರಿಗೆ ಅತಿ ಹೆಚ್ಚು ಉಪಯುಕ್ತವಾಗಿದ್ದರಿಂದ ಸಂಶೋಧನೆ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಅನುಕೂಲವಾಗುತ್ತಿದ್ದು, ಕಾರಣ 2021–22 ನೇ ಸಾಲಿಗೆ ಈಗಾಗಲೇ M/s Balani Infotech Pvt Ltd Delhi ಇವರು Invoice ರೂ, 4,62,879/–ಗಳ ಮೊತ್ತದ ಹಣವನ್ನು ಪಾವತಿ ಮಾಡಲು ಕೋರಿ ಬಿಲ್ಲನ್ನು ಕಳುಹಿಸಿಕೊಟ್ಟಿರುತ್ತಾರೆ. ಕಾರಣ ಸದರಿ e-Journalsನ್ನು ನವೀಕರಿಸಲು ತಮ್ಮ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

**138 ನಿಯತಕಾಲಿಕೆಗಳ Emerald e- resources database ನ್ನು 2021–22 ನೇ ಸಾಲಿಗೆ ನವೀಕರಿಸಲು ಸಭೆ ಅನುಮೋದನೆ ನೀಡಲಾಯಿತು.**

**ಐಟಂ ನಂ: 8: ಝರಾಕ್ಷ ದರ ಮತ್ತು ಸಂಶೋಧನಾ ವಿದ್ಯಾರ್ಥಿನಿಯರ ಸಾಫ್ಟವೇರ plagiarism)ಶುಲ್ಕ ಪರಿಷ್ಕರಿಸುವ ಕುರಿತು.**

**ಪ್ರಸ್ತಾವನೆ:** ವಿಶ್ವವಿದ್ಯಾನಿಯದ ಎಲ್ಲ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಗ್ರಂಥಾಲಯದಲ್ಲಿ ಝರಾಕ್ಷ ಸೇವೆಯನ್ನು ನೀಡಲಾಗುತ್ತಿದೆ. ಇದರ ಪ್ರಸ್ತುತ ದರ ಪ್ರತಿ ಪೇಜಿಗೆ ಪೈಸೆ 50 ಇದ್ದು ಪ್ರಸ್ತುತ ದಿನಮಾನದಲ್ಲಿ ಝರಾಕ್ಷ ಮಶೀನ ಕಾರ್ಯನಿರ್ವಹಣೆ ಈ ದರದಲ್ಲಿ ಮಾಡಲು ಆಗುತ್ತಿಲ್ಲ. ಕಾರಣ ಸದರಿ ಝರಾಕ್ಷ ದರ ಪರಿಷ್ಕರಿಸಲು ಅದರಂತೆ ಸಂಶೋಧನಾ ವಿದ್ಯಾರ್ಥಿನಿಯರ ಪಿ.ಎಚ್.ಡಿ ಪ್ರಬಂಧ plagiarism ಪರಿಶೀಲನೆಗಾಗಿ ಪ್ರಸ್ತುತ ರೂ 500/– ಶುಲ್ಕವನ್ನು ನಿಗದಿಪಡಿಸಿದ್ದು, ಇದನ್ನು ಪರಿಷ್ಕರಿಸಲು ಕೂಡ ಶುಲ್ಕ ಪರಿಷ್ಕರಿಸುವ ಅವಶ್ಯಕತೆ ಇದ್ದು ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಅನುಮೋದನೆಗಾಗಿ ಸಲ್ಲಿಸಿದೆ.

**ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ**

**ಈ ಕೆಳಂಡಂತೆ ಸಭೆ ಅನುಮೋದಿಸಲಾಗಿದೆ.**

- ಪ್ರತಿ ಪೇಜಿಗೆ ಪರಿಷ್ಕೃತ ಝರಾಕ್ಷ ದರ ರೂ 50 ಪೈಸೆ ಬದಲಾಗಿ ರೂ 1/–ಗೆ ಹೆಚ್ಚಿಸಿಲು ಸಭೆ ಅನುಮೋದಿಸಲಾಯಿತು.
- ಪಿ.ಎಚ್.ಡಿ ಪ್ರಬಂಧ plagiarism ಪರಿಶೀಲನೆಯ ಶುಲ್ಕ ರೂ. 500/– ಯಿಂದ ರೂ 1000/– ಹೆಚ್ಚಿಸಿಲು ಸಭೆ ಅನುಮೋದಿಸಲಾಯಿತು.

**ಐಟಂ ನಂ: 9: ಡಿಜಿಟಲ್ ಗ್ರಂಥಾಲಯವನ್ನು ಸ್ಥಾಪಿಸುವ ಕುರಿತು.**

**ಪ್ರಸ್ತಾವನೆ:** ಗ್ರಂಥಾಲಯದ ನಿಯತಕಾಲಿಕ (ಪಿರಾಡಿಕಲ್) ವಿಭಾಗವನ್ನು ಮೊದಲನೆಯ ಮಹಡಿಗೆ ಸ್ಥಳಾಂತರವಾಗಿದ್ದರಿಂದ ಆ ಸ್ಥಳದಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಸ್ಥಾಪಿಸಲಿಕ್ಕೆ ಅತ್ಯಂತ ಸೂಕ್ತವಾದ ಸ್ಥಳವಾಗಿದ್ದು, ಸುಲಭವಾಗಿ ವಿದ್ಯಾರ್ಥಿಗಳು ಡಿಜಿಟಲ್ ಗ್ರಂಥಾಲಯದ ಬಳಕೆ ಮಾಡಿಕೊಳ್ಳಬಹುದು. ಆದ್ದರಿಂದ ಸದರಿ ಡಿಜಿಟಲ್ ಗ್ರಂಥಾಲಯದ e-resourceಗಳನ್ನು ಗರಿಷ್ಠ ಮಟ್ಟದಲ್ಲಿ ಇದರ ಬಳಕೆಯನ್ನು ಮಾಡಿಕೊಳ್ಳಬಹುದು. ಇತ್ತೀಚಿನ ದಿನಗಳಲ್ಲಿ ಅನೇಕ ವಿದ್ಯಾರ್ಥಿಗಳು e-resource ಗಳ ಬಗ್ಗೆ ಹೆಚ್ಚಿನ ಒಲವು ತೋರಿಸುತ್ತಿದ್ದು, ಸದರಿ ಡಿಜಿಟಲ್ ಗ್ರಂಥಾಲಯಕ್ಕೆ ಬಹುಬೇಡಿಕೆಯಿದ್ದು, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಅತ್ಯಂತ ಉತ್ಕೃಷ್ಟಮಟ್ಟದ e-resource ಗಳಿದ್ದು (Emerald, Sage, Mc-GrawHill, Mint, E-shodhasindhu, Annual Review,ISID, J-Gate Plus, JSTOR, Web of Science, South Asia Archives,Word E-Book,Library) ಇವುಗಳ ಉಪಯೋಗ ಹೆಚ್ಚಿನ ಮಟ್ಟದಲ್ಲಿ ಆಗಬೇಕಾದರೆ ಡಿಜಿಟಲ್ ಗ್ರಂಥಾಲಯದ ಅವಶ್ಯಕತೆಯಿದ್ದು, ನಮ್ಮ ವಿಶ್ವವಿದ್ಯಾನಿಲಯವು ನ್ಯಾಕ್‌ನಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ಹಾಗೂ ಕೋವಿಡ್ ನಂತರದಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆ ಇರುವುದರಿಂದ. ಡಿಜಿಟಲ್ ಗ್ರಂಥಾಲಯವನ್ನು ಸ್ಥಾಪಿಸಲು ಬೇಕಾದ ಕಂಪ್ಯೂಟರ್, ಇಂಟರ್‌ನೆಟ್ ಹಾಗೂ ಸಂಬಂಧಪಟ್ಟ ಸಾಫ್ಟವೇರ್‌ಗಳನ್ನು ಅಳವಡಿಸಲು ಮತ್ತು ಖರೀದಿಸಲು ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಶ್ರೀ ನಿರಾಣಿ ಹಣಮಂತಪ್ಪ ಆರ್, ವಿಧಾನ ಪರಿಷತ್ ಸದಸ್ಯರು ಇವರು ದಿನಾಂಕ: 02-02-2022 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಗೆ ಕಾರಣಾಂತರದಿಂದ ಸಭೆ ಹಾಜರಾಗಲು ಆಗದೇ ಇರುವುದರಿಂದ ಗ್ರಂಥಪಾಲಕರಿಗೆ ದೂರವಾಣಿಗೆ ಮುಖಾಂತರ ಕರೆ ಮಾಡಿ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಸ್ಥಾಪಿಸುವ ಡಿಜಿಟಲ್ ಗ್ರಂಥಾಲಯಕ್ಕೆ ರೂ. 15 ಲಕ್ಷದ ಮೊತ್ತದ ಅನುದಾನವನ್ನು ನೀಡಲು ಒಪ್ಪಿರುತ್ತಾರೆ ಅದರಂತೆ ರೂ. 15 ಲಕ್ಷದ ಡಿಜಿಟಲ್ ಗ್ರಂಥಾಲಯದ ಅಂದಾಜು ಪಟ್ಟಿಯನ್ನು ತಯಾರಿಸಿ ವಿವರವಾದ ಪ್ರಸ್ತಾವನೆಯನ್ನು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಸಲ್ಲಿಸಲು ಸಭೆ ಅನುಮೋದಿಸಿತು.

ಐಟಂ ನಂ: **10** : Digital ಗ್ರಂಥಾಲಯವನ್ನು ಸ್ಥಾಪಿಸಲು ಬೇಕಾಗಿರುವ ಪೀಠೋಪಕರಣಗಳನ್ನು ಖರೀದಿಸುವ ಕುರಿತು.

ಪ್ರಸ್ತಾವನೆ: ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಸ್ಥಾಪಿಸಲು ಉದ್ದೇಶಿಸಿದ ಡಿಜಿಟಲ್ ಗ್ರಂಥಾಲಯಕ್ಕೆ ಬೇಕಾಗುವ ಪೀಠೋಪಕರಣಗಳನ್ನು ಖರೀದಿಸುವ ಸಲುವಾಗಿ ಸುಮಾರು 40 ಕಂಪ್ಯೂಟರ್ ಸಿಸ್ಟಮ್‌ಗಳಿಗೆ ಲ್ಯಾನ್ ಕನೆಕ್ಸನ್, ಇಲೆಕ್ಟ್ರಿಫಿಕೇಶನ್ ಅಳವಡಿಸಬೇಕಾಗಿದ್ದು ಹಾಗೂ ಅದಕ್ಕೆ ಬೇಕಾಗಿರುವ ಅಗತ್ಯ ಪೀಠೋಪಕರಣ (ಕಂಪ್ಯೂಟರ್ ಟೇಬಲ್, ಚೇಯರ್ ಹಾಗೂ ಇನ್ನಿತರ)ಗಳನ್ನು ಖರೀದಿಸುವ ಅವಶ್ಯಕತೆಯಿದ್ದು ಸದರಿ ವಿಷಯವನ್ನು ಸಮಿತಿ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

LAN Specification, Electrification, ಕಂಪ್ಯೂಟರ್ ಟೇಬಲ್, ಚೇಯರ್ ಹಾಗೂ ಇತರೆ ಸಾಮಗ್ರಿಗಳ ಕುರಿತು Specification ಜೊತೆಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಪ್ರಸ್ತಾವನೆ ಸಲ್ಲಿಸಲು ಸಭೆ ಅನುಮೋದಿಸಿತು.

ಐಟಂ ನಂ: **11:** ಮೊದಲನೆಯ ಮಹಡಿಯಲ್ಲಿ ಗ್ರಂಥಗಳ ಜೋಡಣೆಗೆ ಗ್ಲಾಸ್ ಅಲಮಾರಗಳು, ರ್ಯಾಕ್‌ಗಳು, ಮೇಜು ಹಾಗೂ ಕುರ್ಚಿಗಳನ್ನು ಒದಗಿಸುವ ಕುರಿತು.

ಪ್ರಸ್ತಾವನೆ: ರೂಸಾ ಅನುದಾನದಡಿಯಲ್ಲಿ ನಿರ್ಮಾಣಗೊಂಡ ಗ್ರಂಥಾಲಯದ ಮೊದಲನೆಯ ಮಹಡಿಯ ನೂತನ ಕಟ್ಟಡಕ್ಕೆ ಗ್ರಂಥಾಲಯಕ್ಕೆ Reference Section, Periodical Section, Dissertation & Thesis Section, SC/ST Book Bank Scheme & Competitive Examination Book Section ಗಳನ್ನು ತಾತ್ಕಾಲಿಕವಾಗಿ ಸ್ಥಾಪಿಸಲಾಗಿದ್ದು, ಸದರಿ ವಿಭಾಗಗಳಲ್ಲಿ ಗ್ರಂಥಗಳನ್ನು ಕ್ರಮಬದ್ಧವಾಗಿ ಜೋಡಣೆ ಮಾಡಬೇಕಾಗಿದ್ದು, ಅದಕ್ಕೆ ಬೇಕಾಗಿರುವ ಗ್ಲಾಸ್ ಅಲಮಾರಗಳು, ರ್ಯಾಕ್‌ಗಳು, ಮೇಜು, ಕುರ್ಚಿಗಳು ಹಾಗೂ ಇತರೆ ಸಾಮಗ್ರಿಗಳನ್ನು ಒದಗಿಸಲು ಸದರಿ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಗ್ಲಾಸ್ ಅಲಮಾರಗಳು, ರ್‍ಯಾಕ್‌ಗಳು, ಮೇಜು, ಕುರ್ಚಿಗಳು ಹಾಗೂ ಇತರೆ ಸಾಮಗ್ರಿಗಳ ಕುರಿತಂತೆ ಗ್ರಂಥಾಲಯದ Standard Specifications ಪ್ರಕಾರ ವಿವಿಧ ಕಂಪನಿಗಳಿಂದ ದರಪಟ್ಟಿಯನ್ನು ತರಸಿ, ಅದಕ್ಕೆ ತಗಲುವ ಅಂದಾಜು ವೆಚ್ಚದ ಪಟ್ಟಿಯನ್ನು ತಯಾರಿಸಿ ಪ್ರಸ್ತಾವನೆ ಸಲ್ಲಿಸಲು ಸಭೆ ಅನುಮೋದಿಸಿತು ಮತ್ತು ಮೊದಲನೇಯ ಮಹಡಿಯ ಕಟ್ಟಡದಲ್ಲಿ Interior Decoration ಮಾಡಿಸಲು Interior Designer ಕರೆಸಿ ಅಂದಾಜು ವೆಚ್ಚದ ಪಟ್ಟಿಯನ್ನು ತಯಾರಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆ ಅನುಮೋದಿಸಿತು

ಮುಂದುವರೆದು, ಗ್ರಂಥಪಾಲಕರು ಎರಡು ಮೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಅಲ್ಲಿರುವ ಗ್ರಂಥಾಲಯದ ವಿನ್ಯಾಸ ಮತ್ತು Interior Decoration ವಿಕ್ಷಣೆ ಮಾಡಿ ನಮ್ಮ ಗ್ರಂಥಾಲಯದಲ್ಲಿ ಅದರಂತೆ ಅನುಷ್ಠಾನಗೊಳಿಸಲು ಪ್ರಯತ್ನ ಮಾಡುವಂತೆ ಸಭೆ ಸೂಚಿಸಿತು.

ಐಟಂ ನಂ: **12:** ಗ್ರಂಥಾಲಯದಲ್ಲಿ ಹೊಸದಾಗಿ ನಿರ್ಮಿಸಲಾದ Conference Hall ನಲ್ಲಿ Smart Board, Platform & LCD Projector ಅಳವಡಿಸುವ ಕುರಿತು.

ವಿಶ್ವವಿದ್ಯಾನಿಲಯದಲ್ಲಿ ರೂಸಾ ಅನುದಾನದಡಿಯಲ್ಲಿ ನಿರ್ಮಾಣಗೊಂಡ ಗ್ರಂಥಾಲಯದ ಕೆಳಮಹಡಿಯ ನೂತನ ಪ್ರಾಂಗಣದಲ್ಲಿ Conference Hall ನಿರ್ಮಾಣಗೊಂಡಿದ್ದು, ಸದರಿ ಹಾಲ್‌ನಲ್ಲಿ ಗ್ರಂಥಾಲಯ ಕುರಿತು ಶಿಬಿರಗಳನ್ನು ಆಯೋಜಿಸುವಾಗ ಸದರಿ ಹಾಲ್‌ಗೆ Smart Board, Platform & LCD Projector ಗಳು ಹಾಗೂ ಸುಮಾರು 150 ಆಸನದ ವ್ಯವಸ್ಥೆಯ ಅವಶ್ಯಕತೆಯಿದ್ದು, ಇದರಲ್ಲಿ ನಿರಂತರವಾಗಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರಸಂಕಿರಣಗಳನ್ನು ಕೂಡಾ ಆಯೋಜಿಸಬಹುದು. ಆದ್ದರಿಂದ ಸದರಿ Conference Hall ಗೆ ಬೇಕಾದ ಎಲ್ಲ ಸಾಮಗ್ರಿಗಳನ್ನು ಪೂರೈಸುವ ಸಲುವಾಗಿ ಸಭೆಯ ಅವಗಾಹನೆ ಹಾಗೂ ಅನುಮೋದನೆ ಕೋರಿದೆ.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

Smart Board, Platform & LCD Projector, 150 Chair Specification ಜೊತೆಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಪ್ರಸ್ತಾವನೆ ಸಲ್ಲಿಸಲು ಸಭೆ ಅನುಮೋದಿಸಿತು.

ಐಟಂ ನಂ: **13:** Koha, K-Nimbus & Drilbit Softwares, ಗಳನ್ನು ನವೀಕರಿಸುವ ಕುರಿತು.

ಪ್ರಸ್ತಾವನೆ: ವಿಶ್ವವಿದ್ಯಾನಿಲಯದ ಎಲ್ಲ ಅಧ್ಯಯನ ವಿಭಾಗಗಳ ಬೋಧಕ, ಸಂಶೋಧನ ವಿದ್ಯಾರ್ಥಿನಿಯರು ಹಾಗೂ ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿನಿಯರ ಅಧ್ಯಯನದ ಹಿತದೃಷ್ಟಿಯಿಂದ ಗ್ರಂಥಾಲಯದ ಗಣಕೀಕರಣವನ್ನು Koha Software ಮುಖಾಂತರ ಕಾರ್ಯನಿರ್ವಹಿಣೆ ಮಾಡಲಾಗುತ್ತಿದೆ. ಇದನ್ನು Informatics India, Banglore ರವರು ನಿರ್ವಹಿಸುತ್ತಿದ್ದು, ಇವರು ಗ್ರಂಥಾಲಯದ ದತ್ತಾಂಶಗಳನ್ನು Cloud Computing Technology ಮುಖಾಂತರ ಕಾರ್ಯನಿರ್ವಹಿಸುತ್ತಾರೆ. ಇದರ ವಾರ್ಷಿಕ

ನಿರ್ವಹಣೆ ಅಂದಾಜು ವೆಚ್ಚ ರೂ 88,000/- ಗಳಾಗಬಹುದಾಗಿದೆ. ಮುಂದುವರೆದು, K-Nimbus ರಿಮೋಟ್ ಲಾಗಿನ್ ಸಾಫ್ಟ್‌ವೇರ್‌ನ್ನು e-Resource ಸೇವೆಯನ್ನು ಮೊಬೈಲ್ ಮತ್ತು ಲ್ಯಾಪ್‌ಟಾಪ್ ಮುಖಾಂತರ ಒದಗಿಸಲು ಮತ್ತು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಗೊಂಡ ಮಹಾ ಪ್ರಬಂಧಗಳ ಕೃತಿಚೌರ್ಯವನ್ನು ಪರೀಕ್ಷಿಸಲು Drilbit Softwareನ್ನು 2021-22ನೇ ಸಾಲಿಗೆ ನವೀಕರಣ ಮಾಡುವ ಅವಶ್ಯಕತೆಯಿದ್ದು, ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

### ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

**2021-22 ನೇ ಸಾಲಿಗಾಗಿ** Koha Software **ವಾರ್ಷಿಕ ನಿರ್ವಹಣೆ ವೆಚ್ಚ ರೂ. 88,000/- ಮತ್ತು** K-Nimbus & Drilbit Softwares ಇವುಗಳ **ವಾರ್ಷಿಕ ನಿರ್ವಹಣೆ ವೆಚ್ಚ ರೂ. 1.00 ಲಕ್ಷಕ್ಕಿಂತ ಕಡಿಮೆ ಮೊತ್ತ AMC ವೆಚ್ಚವನ್ನು ಭರಿಸಲು ಸಭೆ ಅನುಮೋದಿಸಿತು.**

**ಐಟಂ ನಂ:** 14: ಗ್ರಂಥಾಲಯದ ಅಭಿವೃದ್ಧಿ ಹಾಗೂ ಕ್ರಿಯಾತ್ಮಕ ಕಾರ್ಯಚಟುವಟಿಕೆಗಳಿಗೆ ಗ್ರಂಥಪಾಲಕರ ಖಾತೆಯಲ್ಲಿರುವ ಹಣ ಬಳಕೆ ಮಾಡುವ ಕುರಿತು.

**ಪ್ರಸ್ತಾವನೆ:** ಗ್ರಂಥಾಲಯದ ಅಭಿವೃದ್ಧಿ ಹಾಗೂ ಕ್ರಿಯಾತ್ಮಕ ಕಾರ್ಯಚಟುವಟಿಕೆಗಳಿಗೆ ಗ್ರಂಥಪಾಲಕರ ಖಾತೆಗೆ (08542200002040) ದಂಡ ಶುಲ್ಕ ಮತ್ತು ವಿವಿಧ ಸೇವೆಗಳಿಂದ ಸಂಗ್ರಹಿಸಿದ ಸುಮಾರು 6.00 ಲಕ್ಷ ರೂ.ಗಳನ್ನು ಬಳಕೆ ಮಾಡಿಕೊಳ್ಳಲು ಸಭೆಯ ಅವಗಾಹನೆಗೆ ಸಲ್ಲಿಸಿದೆ.

### ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಗ್ರಂಥಾಲಯದಲ್ಲಿ ವಿವಿಧ ಸೇವೆಗಳಿಂದ ಸಂಗ್ರಹಿಸಿದ ಹಣವನ್ನು ಪ್ರಸ್ತುತ ಆರ್ಥಿಕ ಅಧಿಕಾರಿಗಳ ಹೆಸರಿನಲ್ಲಿ ರೂ 5.00 ಲಕ್ಷ ಮೊತ್ತವನ್ನು ವರ್ಗಾವಣೆ ಮಾಡಿ ನಂತರದಲ್ಲಿ ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ಗ್ರಂಥಾಲಯದ ಅಭಿವೃದ್ಧಿ ಮತ್ತು ಚಟುವಟಿಕೆಗಳಿಗಾಗಿ ಹಾಗೂ ಕಾರ್ಯಕ್ರಮಗಳಿಗೆ ಹಣ ಬಳಸಲು ಸಭೆ ಅನುಮತಿಸಿತು.

**ಐಟಂ ನಂ: 15:** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು ಕುರಿತು ಚರ್ಚಿಸುವುದು.

### ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

- ಗ್ರಂಥಾಲಯದ ಗ್ರಂಥಗಳ ಭದ್ರತಾ ಹಿತದೃಷ್ಟಿಯಿಂದ ಗ್ರಂಥಾಲಯ ಕಟ್ಟಡಕ್ಕೆ ಸುಮಾರು 30 High end resolutions CCTVಯನ್ನು ಅಳವಡಿಸಲು ಸಭೆ ಅನುಮೋದಿಸಿತು ಇದರ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆ ಸೂಚಿಸಿತು.
- ಗ್ರಂಥಾಲಯದ ವತಿಯಿಂದ ಸಂಶೋದನೆ ವಿದ್ಯಾರ್ಥಿನಿಯರಿಗೆ ಮತ್ತು ಬೋಧಕ ಸಿಬ್ಬಂದಿಗಳಿಗೆ Research Publications & Ethics, Research Matrices, Plagiarism Issues and e- resources ಎಂಬ ವಿಷಯಗಳ ಮೇಲೆ ಕಾರ್ಯಾಗಾರ ಮಾಡಲು ಸಭೆ ಅನುಮೋದಿಸಿತು.

* ವಿಶ್ವವಿದ್ಯಾನಿಲಯದ ವತಿಯಿಂದ Multidisciplinary ವಿಷಯಗಳ ಮೇಲೆ e-Journal ಪ್ರಾರಂಭಿಸಲು ಸಭೆ ಸೂಚಿಸಿತ್ತಾ, ಇದಕ್ಕೆ ಒಂದು ಸಮಿತಿಯನ್ನು ರಚಿಸಿ, ಇದನ್ನು ಪಾರಂಭಿಸಲು ಬೇಕಾದ ಪ್ರಕ್ರಿಯೆಗಳ ಚರ್ಚಿಸಿ ಅನುಷ್ಠಾನಗೊಳಿಸಲು ಸಭೆ ಸಲಹೆ ನೀಡಿತು.
* ವಿಶ್ವವಿದ್ಯಾನಿಲಯದ ಹಣಕಾಸಿನ ಅಧಿಕಾರಿಗಳಾದ ಪ್ರೊ. ಎಸ್.ಬಿ ಕಾಮಶೆಟ್ಟಿ ಇವರು ವಿಶ್ವವಿದ್ಯಾನಿಲಯದ ಸಿಂಡಿಕೇಟ ಸಭೆ, ವಿದ್ಯಾವಿಷಯಕ್ ಪರಿಷತ್ ಸಭೆ ಹಾಗೂ ಇನ್ನೀತರ ಸಭೆಗಳಿಗೆ ಸಿಂಡಿಕೇಟ ಮತ್ತು ವಿದ್ಯಾವಿಷಯಕ್ ಪರಿಷತ್ ಸದ್ಯಸರುಗಳ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳನ್ನು ಭರಿಸಲಿಕ್ಕೆ ವಿಶ್ವವಿದ್ಯಾನಿಲಕ್ಕೆ ತುಂಬಾ ಹೊರೆಯಾಗುತ್ತಿದ್ದು ಇದನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ವಿಶ್ವವಿದ್ಯಾನಿಲಯ ರಚನಾತ್ಮಕವಾದ ಪರಿವಾರವನ್ನು ಕಂಡುಕೊಳ್ಳಲು ಸೂಚಿಸಿದರು. ಸಭೆಯಲ್ಲಿ ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿತು ಮತ್ತು ಇದಕ್ಕೆ ಸೂಕ್ತವಾದ ಕ್ರಮಗಳನ್ನು ಮುಂದಿನ ದಿನಗಳಲ್ಲಿ ಹಂತ-ಹಂತವಾಗಿ ಯಾವ ರೀತಿಯಲ್ಲಿ ಜಾರಿಗೊಳಿಸಬೇಕೆಂದು ಪರಾಮರ್ಶಿತು.

ಸದರಿ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಗ್ರಂಥಪಾಲಕರು ವಂದನೆಗಳನ್ನು ಸಲ್ಲಿಸಿದರು.

| | | |
|---|---|---|
| ಗ್ರಂಥಪಾಲಕರು | ಕುಲಸಚಿವರು | ಕುಲಪತಿಗಳು |
| ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ |